ಜಿ.ವಿ. ಅರುಣ



# ನಿಮಗೆ ನೆನಪಿದೆಯೇ?

ಪರೀಕ್ಷೆಗೆ ಸಿದ್ಧವಾಗಲು ಓದಿದ್ದ ವಿಷಯಗಳು ನಮ್ಮ ನೆನಪಿನಲ್ಲಿ ಎಷ್ಟರಮಟ್ಟಿಗೆ ಇರುತ್ತವೆ ಎಂದು ಎಲ್ಲರಿಗೂ ಗೊತ್ತು. ಆಗ ಭೌತಶಾಸ್ತ್ರದ, ಗಣಿತದ ಸೂತ್ರಗಳನ್ನು ನೆನಪಿಡಲು ಇಂಗ್ಲಿಷಿನ ಅಕ್ಷರಗಳ ಸಂಕ್ಷಿಪ್ತ ಸಂಕೇತವನ್ನು ಉರು ಹೊಡೆಯುತ್ತಿದ್ದೆವು. ಇಷ್ಟಾದರೂ ಅವು ನಮ್ಮ ನೆನಪಿನಲ್ಲಿ ಉಳಿಯುತ್ತಿರಲಿಲ್ಲ. ನಮ್ಮ ನೆನಪಿಗೆ ಬರುತ್ತಿದ್ದುದು ಒಂದೇ, ಕರ್ಣನಿಗೆ ಪರಶುರಾಮರು ಕೊಟ್ಟ ಶಾಪ. ಆದರೂ ಹೇಗೋ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬೀಗುತ್ತಿದ್ದೆವು.

ಕಾಮನಬಿಲ್ಲಿನಲ್ಲಿ ಕಾಣುವ ಬಣ್ಣದ ಕಿರಣಗಳನ್ನು, ಅವುಗಳು ಕಾಣುವ ಕ್ರಮದಲ್ಲಿ ನೆನಪಿನಲ್ಲಿಡಲು ವಿಐಬಿಜಿವೈಒಆರ್ (ವಿಬ್ಗ್ಯಾರ್ VIBGYOR) ಎಂಬ ಸಂಕ್ಷಿಪ್ತ ಸಂಕೇತವನ್ನು ಬಳಸುತ್ತಿದ್ದೆವು. ಅಷ್ಟೇ ಏಕೆ, ಯಾವುದೇ ದಿನದ ರಾಹುಕಾಲವನ್ನು ಕಂಡುಹಿಡಿಯಲು 'ಮದರ್ ಸಾ ಫಾದರ್ ವೇರಿಂಗ್ ದ ಟರ್ಬನ್ ಸಡನ್ಲೀ' ಎಂಬ ಆಂಗ್ಲ ವಾಕ್ಯದ ಮೊದಲ ಅಕ್ಷರಗಳನ್ನು ನಿರ್ದೇಶಿಸಿಕೊಂಡು ರಾಹುಕಾಲವನ್ನು ಹೇಳುವ ಸುಲಭೋಪಾಯವನ್ನು ಹೇಳಿಕೊಟ್ಟಿದ್ದರು.

ನೆನಪಿದೆಯೆ? ನಮ್ಮ ಭೂಗೋಳದ ತರಗತಿಯಲ್ಲಿ ನೈರುತ್ಯ ಹಾಗೂ ಈಶಾನ್ಯ ಮಾರುತಗಳ ದಿಕ್ಕನ್ನು ನೆನಪಿಡಲು 'ಆನೆವಾಈ' ಎಂಬ ಸಂಕ್ಷಿಪ್ತಗಳಿಂದ ಭಾರತದ ಭೂಪಟದಲ್ಲಿ ಆಗ್ನೇಯ, ನೈರುತ್ಯ ಮುಂತಾದ ದಿಕ್ಕುಗಳನ್ನು ಗುರುತಿಸಿ ತೋರಿಸಿದ್ದರು. ಇದನ್ನೇ ನೈರುತ್ಯದ ಖೈಬರ್ ಕಣಿವೆಯಿಂದ ಹೂಣರು, ಘಜ್ನೀ ಘೋರಿಗಳು ದಾಳಿ ಮಾಡಿದರೆಂದು ಚರಿತ್ರೆಯಲ್ಲಿ ಹೇಳಿಕೊಟ್ಟಾಗ, ಆ ಕಣಿವೆಗಳಿದ್ದ ಸ್ಥಳವನ್ನು ಸುಲಭವಾಗಿ ಭೂಪಟದಲ್ಲಿ ಗುರುತಿಸಿಕೊಂಡಿದ್ದೆವಲ್ಲವೆ!

ಚಿಕ್ಕಂದಿನಲ್ಲಿ ಕಲಿತ ಈ ತರಹದ ಅನೇಕ ಸಂಕ್ಷಿಪ್ತ ಸಂಕೇತಗಳು ಎಲ್ಲರಲ್ಲೂ ಹುದುಗಿವೆ ಎಂಬುದು ಸರ್ವವಿದಿತ. ಅವುಗಳ ಸಂಖ್ಯೆ ಅವರವರ ಗುರುಗಳ ಪ್ರಭಾವ ಹಾಗೂ ಸ್ವಪ್ರತಿಭೆಗಳ ಮೇಲೆ ಅವಲಂಬಿತವಾಗಿರುತ್ತವೆ. ನಿಮಗೆ ನೆನಪಿಗೆ ಬರುವ ಸಂಕ್ಷಿಪ್ತ ಸಂಕೇತಗಳನ್ನು ದಯವಿಟ್ಟು ನನಗೆ ತಿಳಿಸಿ. ಅವುಗಳನ್ನು ಒಟ್ಟುಗೂಡಿಸಿ ಮುಂದಿನ ಪೀಳಿಗೆಗೆ ದಾಟಿಸೋಣ.

ನೆನಪಿನ ವಿಚಾರಕ್ಕೆ ಬಂದಾಗ, ಒಂದು ವಿಷಯ ನನಗೆ ಇದುವರೆಗೆ ಅರ್ಥವಾಗಿಲ್ಲ. 'ನೀವು' ಮೊದಲು ಬರೆದ ಅಥವಾ ಬರೆಯಬೇಕೆಂದುಕೊಂಡ ಪ್ರೇಮಪತ್ರದ ಒಕ್ಕಣೆಯ ಪ್ರತಿ ಅಕ್ಷರವೂ ಈಗಲೂ ನಿಮಗೆ ಹೇಗೆ ನೆನಪಿನಲ್ಲಿ ಇರುತ್ತದೆ ಎಂದು. ನಾನು ಹೇಳಿದ್ದು, 'ನೀವು ಬರೆದ ಪ್ರೇಮಪತ್ರ' ಎಂದು; 'ನಾನು ಬರೆದ ಅಲ್ಲ'. ಆ ಒಕ್ಕಣೆಯನ್ನು ನೆನೆದು ಈಗಾಗಲೇ ನಿಮ್ಮ ಮುಖದ ಮೇಲೆ ಮೂಡುತ್ತಿರುವ ಮಂದಹಾಸ ನನಗೆ ಚೆನ್ನಾಗಿ ಕಾಣುತ್ತಿದೆ. ಅವನ್ನು ನನ್ನೊಡನೆ ಗುಟ್ಟಾಗಿ ಹಂಚಿಕೊಳ್ಳಿ. ಆಗ ನಿಮ್ಮ ಮನಸ್ಸು ಹೇಗೆ ಪ್ರಫುಲ್ಲವಾಗುತ್ತದೆ ನೋಡಿ! ನಿಮ್ಮ 'ಆ' ಗುಟ್ಟನ್ನು ನಾನು ಯಾರಿಗೂ ಬಿಟ್ಟು ಕೊಡುವುದಿಲ್ಲ ಎಂಬ ಭರವಸೆಯನ್ನು ನೀಡುತ್ತೇನೆ. ಹೂಂ, ನಿಮ್ಮ ಮೊಬೈಲ್ ತಕ್ಷಣವೇ ಕೈಗೆತ್ತಿಕೊಳ್ಳಿ. ನೀವು ಕರೆ ಮಾಡಿದಾಗ ನನ್ನ ಸಂಖ್ಯೆ ವ್ಯಸ್ತವಾಗಿದ್ದರೆ, ಇನ್ಯಾರೋ ಅವರ ಗುಟ್ಟು ಬಿಟ್ಟುಕೊಡುತ್ತಿರುತ್ತಾರೆ. ಆದ್ದರಿಂದ ಸ್ವಲ್ಪ ಸಮಯ ಕಾಯಿರಿ. ಇಲ್ಲವೇ ಅನಂತರ ಕರೆ ಮಾಡಿ.

